ಶ್ರೀ ಎಚ್. ಸಿದ್ಧವೀರಪ್ಪ.—ಅದು ನನಗೆ ಗೊತ್ತಿಲ್ಲ. ಆ ರೀತಿ ಅನ್ಯಾಯವಾಗಿದ್ದರೆ either on punishment or whatever it is ಅವರು ರಾಜೀನಾಮೆ ಕೊಟ್ಟಿದ್ದರೆ, ಅವರು ಪುನಃ ಕೆಲಸಕ್ಕೆ ಬರುವುದಾದರೆ, ಅವರನ್ನು ತೆಗೆದುಕೊಳ್ಳುತ್ತೇವೆ.

Increase in the bed strength of T. B. Hospital, Tumkur

247. **Sri N. BASAVAIAH** (Chikkanayakanahalli)—

Will the Minister for Heatlh be pleased to state :—

(*a*) the number of beds, both for male and female patients, in the T. B. Hospital, Tumkur ;

(*b*) whether it has come to the notice of the Government that the present bed strength is not sufficient to admit the number of patients approching for admission to the Hospital as in-patients ;

(*c*) whether there is any proposal for increasing the bed strength in the above hospital ;

(*d*) if not, the reasons for the same ?

Sri H. SIDDAVEERAPPA (Minister for Health).—

(*a*) 30 beds (15 beds male and 15 female).

(*b*) No.

(*c*) No.

(d) Does not arise.

ಶ್ರೀ ಎನ್. ಬಸವಯ್ಯ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 50 ಹಾಸಿಗೆಗಳೆಂದು ಹೇಳಿ ಅದರಲ್ಲಿ 15 ಪುರುಷರ ಹಾಗೂ 15 ಮಹಿಳೆಯರ ಹಾಸಿಗೆಗಳು ಎಂದು ಹೇಳಿದೆ. ಅಂದಮೇಲೆ ಒಟ್ಟು 30 ಹಾಸಿಗೆಗಳು ಆಯಿತು. ಇನ್ನುಳಿದ 20 ಹಾಸಿಗೆಗಳು ಯಾರಿಗೆ ?

† ಶ್ರೀ ಎಚ್. ಸಿದ್ಧವೀರಪ್ಪ.—ಅಲ್ಲಿರುವುದು 30 ಹಾಸಿಗೆಗಳು. ಕನ್ನಡದಲ್ಲಿ ತಪ್ಪಾಗಿ ಪ್ರಿಂಟ್ ಆಗಿದೆ. ಕೆಲವು ನಂದರ್ಭಗಳಲ್ಲಿ ಪ್ರಿಂಟರ್ಸ್ ಡೆವಿಲ್ ಆಗುತ್ತದೆ.

ಅಧ್ಯಕ್ಷರು.—ಇಂಗ್ಲಿಷ್ ಕಾಪಿಯಲ್ಲಿ 30 ಹಾಸಿಗೆಗಳೆಂದು ಸರಿಯಾಗಿ ಪ್ರಿಂಟ್ ಆಗಿದೆ.

ಶ್ರೀ ಎನ್ ಬಸವಯ್ಯ.—ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಕೇವಲ 30 ಬೆಡ್‌ಗಳು ಸಾಕಾಗುವುದಿಲ್ಲ. ಇನ್ನೂ ಹೆಚ್ಚು ಬಹಳ ಜಾಗವಾಗಿ ಇರುತ್ತಾರೆ. ಆದ್ದರಿಂದ ಸಾಕಷ್ಟು ಬೆಡ್‌ಗಳು ಇಲ್ಲದೆ ಇದ್ದರೆ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈಗಿರತಕ್ಕ ಸಂಖ್ಯೆಯನ್ನು ಹೆಚ್ಚಿಸುವುದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸುತ್ತಾರೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಅಲ್ಲಿ ಟಿ. ಬಿ. ಆಸ್ಪತ್ರೆ ಇಲ್ಲ. ಟಿ. ಬಿ. ವಾರ್ಡ್ ಮಾತ್ರ ಇದೆ. ಈಗ 15 ಬೆಡ್ಸ್ ಗಂಡಸರಿಗೆ, 15 ಬೆಡ್ಸ್ ಹೆಂಗಸರಿಗೆ ರಿಜರ್ವ್ ಆಗಿದೆ. ಅಲ್ಲಿ ಈಗ ಒಂದು ಡಿಸ್ಪೆನ್ಸರಿ ಟಿ. ಬಿ. ಸೆಂಟರ್ ಇದೆ. ಆ ವಿಚಾರ ಮಾನ್ಯ ಸದಸ್ಯರಿಗೂ ಗೊತ್ತಿದೆ. 1963 ನೇ ಇಸವಿಯಿಂದ ಅಷ್ಟರತಕ್ಕವರೇ ಎಲ್ಲಾ ಕಡೆಯೂ ಹೋಗಿ ಕೆಲಸ ಮಾಡುತ್ತಿದ್ದಾರೆ. ಇದೀ ಜಿಲ್ಲೆಯಲ್ಲಿ ಅಲ್ಲಿನವರು ಕೆಲಸ ಮಾಡುತ್ತಿದ್ದಾರೆ. ಈ ವರ್ಷ ನವೆಂಬರ್ ಗೆ ಇಡೀ ಸಂಸ್ಥಾನಕ್ಕೆ 50 ಬೆಡ್‌ಗಳನ್ನು ಮಾತ್ರ ಎಕ್ಸ್‌ಟ್ರಾ ಕೇಂದ್ರಸರ್ಕಾರದವರು ಮಂಜೂರು ಮಾಡಿಕೊಟ್ಟಿದ್ದಾರೆ. ನಮಗೆ ಹೆಚ್ಚಿನ ಅವಶ್ಯಕತೆಯೇನೋ ಇದೆ ಆದರೆ ಈಗ ಸೊತಕ್ಕೆ ಬೆಡ್‌ಗಳನ್ನು ಬಹಳ ಪ್ರಾಮುಖ್ಯವಾಗಿ ಅವಶ್ಯಕತೆ ಇರುವ ಕಡೆಗಳಿಗೆ ಹಂಚಬೇಕಾಗಿರುವುದರಿಂದ, ತುಮಕೂರಿನಲ್ಲಿ ಈಗ ಸದ್ಯಕ್ಕೆ ಬೆಡ್‌ಗಳನ್ನು ಈ ಆಸ್ಪತ್ರೆಯಲ್ಲಿ ಜಾಸ್ತಿ ಮಾಡುವುದಕ್ಕೆ ಅವಕಾಶವಿಲ್ಲ.